Indt 11216

ಕರ್ನಾಟಕ ಸರ್ಕಾರ

ಸಂಖ್ಯೆ: MID 945 MISU 2025

ಕರ್ನಾಟಕ ಸರ್ಕಾರದ ಸಚಿವಾಲಯ
ಡಾ||ಬಿ.ಆರ್ ಅಂಬೇಡ್ಕರ್ ವೀದಿ
ವಿಕಾಸ ಸೌಧ.
ಬೆಂಗಳೂರು, ದಿನಾಂಕ: 19.11.2025

**ಇವರಿಂದ:**

ಸರ್ಕಾರದ ಕಾರ್ಯದರ್ಶಿ.
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ವಿಕಾಸ ಸೌಧ, ಬೆಂಗಳೂರು.

**ಇವರಿಗೆ:**

ಮುಖ್ಯ ಇಂಜಿನಿಯರ್,
ಸಣ್ಣ ನೀರಾವರಿ, ಉತ್ತರ ವಲಯ,
ವಿಜಯಪುರ.

**ಮಾನ್ಯರೆ,**

**ವಿಷಯ:** 2025-26ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯ ಯ ಶಿಗ್ಗಾಂವ-ಸವಣೂರ ಮತಕ್ಷೇತ್ರಕ್ಕೆ ಕೆರೆ ದುರಸ್ತಿ ಹಾಗೂ ಅಭಿವೃದ್ಧೀಕರಣ ಅಡಿ ಅನುಮೋದನೆಯಾದ ಕಾಮಗಾರಿಗಳಿಗೆ ಬದಲಿ ಕಾಮಗಾರಿಗಳನ್ನು ಅನುಮೋದನ ನೀಡುವ ಕುರಿತು.

**ಉಲ್ಲೇಖ:** 1. ತಮ್ಮ ಪತ್ರ ಸಂಖ್ಯೆ: ಮುಇಂ / ಸನೀಉವ / ವಿಜಪಿ /ಪಿಬಿ-3 / ಅನುದಾನ / 2025-26 / 5319, ದಿನಾಂಕ: 06.09.2025
2. ಸರ್ಕಾರದ ಸಮ ಸಂಖ್ಯೆ ಪತ್ರ ದಿನಾಂಕ: 14.11.2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (2) ರ ಸರ್ಕಾರದ ಪತ್ರದಲ್ಲಿ 2025-26ನೇ ಸಾಲಿನಲ್ಲಿ ಕೆರೆಗಳ ಆಧುನೀಕರಣ ಯೋಜನೆಯಡಿ ಅನುಮೋದನೆಯಾದ ಕೆಳಕಂಡ ಕಾಮಗಾರಿಗಳಿಗೆ ಈ ಕೆಳಕಂಡಂತೆ ಬದಲಿ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರದ ಸಹಮತಿಯನ್ನು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಬದಲಿ ಕಾಮಗಾರಿಗಳ ಹೆಸರು | ಅಂದಾಜು ಮೊತ್ತ |
|---|---|---|---|---|
| **ಲೆಕ್ಕ ಶೀರ್ಷಿಕೆ: 4702-00-101-1-07-139 ಕೆರೆಗಳ ಆಧುನೀಕರಣ** | | | | |
| 1. | ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ಹಳೇಬಂಕಾಪುರ ಕೆರೆ, ಶೀಲವಂತ - ಸೋಮಾಪುರ ಕೆರೆ, ಹಿರೇಮಣಕಟ್ಟಿ ಕೆರೆ, ಹೋತನಹಳ್ಳಿ ಕೆರೆ ಮತ್ತು ಚಾಕಾಪುರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ | 400.00 | ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ಹಳೇಬಂಕಾಪುರ ಕೆರೆ, ಶೀಲವಂತ ಸೋಮಾಪುರ ಕೆರೆ, ಹಿರೇಮಣಕಟ್ಟಿ ಕೆರೆ, ಹೋತನಹಳ್ಳಿ ಕೆರೆ ಮತ್ತು ಚಾಕಾಪುರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ | 490.00 |
| 2. | ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ತವರಮೆಳ್ಳಿಹಳ್ಳಿ ಹಲಸೂರ ಕೆರೆ, ಹೊಸಳ್ಳಿ ಗ್ರಾಮದ ಕೆರೆ, ತಳ್ಳಿಹಳ್ಳಿ ಗ್ರಾಮದ ಕೆರೆ, ಬಿದ್ದಿ ಗ್ರಾಮದ ಕೆರೆ, ಜೇಕಿನಕಟ್ಟಿ ಗ್ರಾಮದ – ಕೆರೆ, ಗೋವಿನಹಾಳ ಗ್ರಾಮದ ಕೆರೆ, ಮತ್ತು ಹಳೇಬಂಕಾಪುರ ಗ್ರಾಮದ ಊರ ಕೆರೆ ಅಭಿವೃದ್ಧಿ ಕಾಮಗಾರಿ. | 410.00 | ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ತವರಮೆಳ್ಳಿಹಳ್ಳಿ ಹಲಸೂರ ಕೆರೆ, ಹೊಸಳ್ಳಿ ಗ್ರಾಮದ ಕೆರೆ, ತಳ್ಳಿಹಳ್ಳಿ ಗ್ರಾಮದ ಕೆರೆ, ಬಿದ್ದಿ ಗ್ರಾಮದ ಕೆರೆ ಮತ್ತು ಜೇಕಿನಕಟ್ಟಿ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ. | 490.00 |

| | | | | |
|---|---|---|---|---|
| 3. | ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ಕ್ಯಾಲಕೊಂಡ ಗ್ರಾಮದ ಊರ ಕೆರೆ, ಸುರಪಗಟ್ಟಿ ಗ್ರಾಮದ ಊರ ಕೆರೆ, ಖುರ್ಷಾಪುರ ಗ್ರಾಮದ ಊರ ಕೆರೆ, ಮೂಕಬಸರಿಕಟ್ಟಿ ಗ್ರಾಮದ ಸ.ನಂ 41ರ ಹಳೇಊರ ಕೆರೆ, ಬೇವಿನಹಳ್ಳಿ ಗ್ರಾಮದ ಸ.ನಂ 55ರ ಕೆರೆ, ಪಾಣಿಗಟ್ಟಿ ಗ್ರಾಮದ ಕೆರೆ, ಹಿರೇಬೆಂಡಿಗೇರಿ ಗ್ರಾಮದ ನಾದಿಗಟ್ಟಿ ಕೆರೆ, ತಿಮ್ಮಾಪುರ ಗ್ರಾಮದ ಊರ ಕೆರೆ ಅಭಿವೃದ್ಧಿ ಕಾಮಗಾರಿ. | 415.00 | ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ಗೋವಿನಹಾಳ ಗ್ರಾಮದ ಕೆರೆ, ಹೊಸೂರ ಗಂಗಿಬಾವಿ ಕೆರೆ, ಕುನ್ನೂರ ಗ್ರಾಮದ ಕೆರೆ, ಹಳೇಬಂಕಾಪುರ ಗ್ರಾಮದ ಊರ ಕೆರೆ ಮತ್ತು ಗುಡ್ಡದಚೆನ್ನಾಪುರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ | 475.00 |
| 4. | | | ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ಕ್ಯಾಲಕೊಂಡ ಗ್ರಾಮದ ಊರ ಕೆರೆ, ಸುರಪಗಟ್ಟಿ ಗ್ರಾಮದ ಊರ ಕೆರೆ, ಖುರ್ಷಾಪುರ ಗ್ರಾಮದ ಊರ ಕೆರೆ, ಮೂಕಬಸರಿಕಟ್ಟಿ ಗ್ರಾಮದ ಹಳೇಊರ ಕೆರೆ ಮತ್ತು ಕುಂದೂರು ಕೆರೆ ಅಭಿವೃದ್ಧಿ ಕಾಮಗಾರಿ | 460.00 |
| 5. | | | ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ಬೇವಿನಹಳ್ಳಿ ಗ್ರಾಮದ ಕೆರೆ, ಪಾಣಿಗಟ್ಟಿ ಗ್ರಾಮದ ಕೆರೆ, ಹಿರೇಬೆಂಡಿಗೇರಿ ಗ್ರಾಮದ ನಾದಿಗಟ್ಟಿ ಕೆರೆ, ತಿಮ್ಮಾಪುರ ಗ್ರಾಮದ ಊರ ಕೆರೆ ಮತ್ತು ಮಾದಾಪುರ ಕೆರೆ ಅಭಿವೃದ್ಧಿ ಕಾಮಗಾರಿ | 485.00 |

(ಮಾನ್ಯ ಸಣ್ಣ ನೀರಾವರಿ ಸಚಿವರಿಂದ ಅನುಮೋದಿತ)

ಷರತ್ತುಗಳು:

1. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ, ಅನುಮೋದಿಸಿದ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2. ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ, ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವವಿದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನ ಪಡೆದು, ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
3. ಅಂದಾಜಿನಲ್ಲಿ ಸಹಮತಿಸಿದ ಅನುದಾನದ ಮಿತಿಯಲ್ಲಿಯೇ Tender Premium, Price Escalation, Land Acquisition, Maintenance Expenses, GST ಇತ್ಯಾದಿಗಳ ಮೊತ್ತವೂ ಒಳಗೊಂಡಿರತಕ್ಕದ್ದು. ಯಾವುದೇ ಕಾರಣಕ್ಕೂ ಅಂದಾಜಿನಲ್ಲಿ ನಿರ್ಣಾಯಕ ಐಟಂಗಳು ಕೈಬಿಡದಂತೆ ನೋಡಿಕೊಳ್ಳತಕ್ಕದ್ದು.

ತಮ್ಮ ನಂಬುಗೆಯ,

Y.N.
19/11/2025

(ವೀಣಾ ವೈ.ಎನ್)
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.

**Name of work: Improvements to Bevinahalli village tank,Panigatti village Tank, Hirebendigeri village Nadigatti Tank, Timmapura village tank, Madapura Tank in Shiggoan Taluk Haveri District**

| GENERAL ABSTRACT | | |
|---|---|---|
| **Sl.No.** | **Description** | **Amount** |
| 1 | Improvement of Tank Bund, sluice and Waste weir | 16260557.57 |
| 2 | De-silting of Tail channel and tank bed | 3348089.00 |
| 3 | Fencing and barbed wire for Tank | 15247313.50 |
| 4 | Pedestrain path on Tank bund | 3918988.50 |
| 5 | **Sub Total-I** | **38774948.57** |
| 6 | Tender premium 5% | **1938747.43** |
| 7 | ~~Consultancey charges for preparation of~~ DPR 0.5% | ~~**193874.74**~~ |
| 8 | **Sub Total-II** | ~~**40907570.74**~~ 40713696.00 |
| 9 | Add GST 18 % | ~~**7363362.73**~~ 7328465.28 |
| 10 | Miscellaneous charges and Rounding off | ~~229066.53~~ 457838.70 |
| | **Grand Total Rs** | **48500000.00** |

**FOUR CRORE EIGHTY FIVE LAKH RUPEES ONLY**

Assistant Executive Engineer,
MI & GWD Sub-Division, Hangal.

Executive Engineer
MI & GWD Division Dharwad

Superintendent Engineer
MI & GWD Circle Belagavi

Chief Engineer
MI & GWDD(N) Zone Vijayapur

~~ಆಡಳಿತಾತ್ಮಕ ಒಪ್ಪಿಗೆ ಮತ್ತು~~ ತಾಂತ್ರಿಕ ಮಂಜೂರಾತಿಯನ್ನು

ರೂ: ೪೩೩.೦೦ ಲಕ್ಷಗಳು (ಅಕ್ಷರಗಳಲ್ಲಿ ರೂಪಾಯಿ ನಾಲ್ಕು ನೂರು ಮೂವತ್ತ ಮೂರು ಲಕ್ಷಗಳು ಮಾತ್ರ) ಲೆಕ್ಕ ಶೀರ್ಷಿಕೆ ೪೭೦೨- ಕೆರೆಗಳ [illegible] ಪ್ರಧಾನ ಕಾಮಗಾರಿಗಳು ಅಡಿಯಲ್ಲಿ.

ನೋಂದಣಿ ಸಂಖ್ಯೆ: 256/2025-26 ನೇದರಲ್ಲಿ ನೀಡಲಾಗಿದೆ.

ಕಿ.ಇಂ./ಸ.ಇಂ. ತಾಂ.ಸ. ಉ.ಮು.ಇಂ. ಅ.ಇಂ. ಮುಖ್ಯ ಇಂಜಿನೀಯರ್.

ಸ.ನೀ. ಮತ್ತು ಅಂ.ಅ.ಇ.,

ಉತ್ತರ ವಲಯ, ವಿಜಯಪುರ

## ಮುಖ್ಯ ಇಂಜನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಉತ್ತರ ವಲಯ, ವಿಜಯಪುರ ಇವರ ಕಛೇರಿ ನಡುವಳಿಗಳು

ವಿಷಯ:- ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕಿನ ಬೆವಿನಹಳ್ಳಿ ಗ್ರಾಮದ ಊರ ಕೆರೆ, ಪಾಣಿಗಟ್ಟಿ ಗ್ರಾಮದ ಕೆರೆ, ಹಿರೇಬೆಂಡಿಗೇರಿ ಗ್ರಾಮದ ನಾದಿಗಟ್ಟಿ ಕೆರೆ, ತಿಮ್ಮಾಪುರ ಗ್ರಾಮದ ಊರ ಕೆರೆ ಮತ್ತು ಮಾದಾಪುರ ಕೆರೆ ಅಭಿವೃದ್ಧಿ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಉಲ್ಲೇಖ:- 1) ಸರಕಾರದ ಆದೇಶ ಸಂಖ್ಯೆ: MID/945/MISU/2025, ದಿನಾಂಕ: 19/11/2025.
2) ಅಧೀಕ್ಷಕ ಇಂಜನೀಯರರು,ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಬೆಳಗಾವಿ ವೃತ್ತ ಇವರ ಕಛೇರಿ ಪತ್ರ:2990 ದಿ:10-02-2026

*****

**ಪ್ರಸ್ತಾವನೆ:-**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕಿನ ಬೆವಿನಹಳ್ಳಿ ಗ್ರಾಮದ ಊರ ಕೆರೆ, ಪಾಣಿಗಟ್ಟಿ ಗ್ರಾಮದ ಕೆರೆ, ಹಿರೇಬೆಂಡಿಗೇರಿ ಗ್ರಾಮದ ನಾದಿಗಟ್ಟಿ ಕೆರೆ, ತಿಮ್ಮಾಪುರ ಗ್ರಾಮದ ಊರ ಕೆರೆ ಮತ್ತು ಮಾದಾಪುರ ಕೆರೆ ಅಭಿವೃದ್ಧಿ ಕಾಮಗಾರಿಗೆ, 2025-26 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4702-00-101-1-07-139 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು ಅಡಿಯಲ್ಲಿ ರೂ.485.00 ಲಕ್ಷಗಳ ಅಂದಾಜು ಮೊತ್ತಕ್ಕೆ ಕಾಮಗಾರಿಯನ್ನು ಕೈಗೊಳ್ಳಲು ಉಲ್ಲೇಖ-(1)ರ ಸರಕಾರದ ಆದೇಶದನ್ವಯ ಕಾಮಗಾರಿಗೆ ಅನುಮೋದನೆ ನೀಡಲಾಗಿರುತ್ತದೆ.

ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕಿನ ಬೆವಿನಹಳ್ಳಿ ಗ್ರಾಮದ ಊರ ಕೆರೆ, ಪಾಣಿಗಟ್ಟಿ ಗ್ರಾಮದ ಕೆರೆ, ಹಿರೇಬೆಂಡಿಗೇರಿ ಗ್ರಾಮದ ನಾದಿಗಟ್ಟಿ ಕೆರೆ, ತಿಮ್ಮಾಪುರ ಗ್ರಾಮದ ಊರ ಕೆರೆ ಮತ್ತು ಮಾದಾಪುರ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಬೆವಿನಹಳ್ಳಿ ಗ್ರಾಮದ ಊರ ಕೆರೆ 250.00ಮೀ, ಹಿರೇಬೆಂಡಿಗೇರಿ ಗ್ರಾಮದ ನಾದಿಗಟ್ಟಿ ಕೆರೆ 450.00 ಮೀ ಉದ್ದ, ತಿಮ್ಮಾಪುರ ಗ್ರಾಮದ ಊರ ಕೆರೆ 350.00 ಮೀ ಉದ್ದ, ಮಾದಾಪುರ ಕೆರೆ 1980.00 ಮೀ ಉದ್ದ, ಏರಿ ಸುಧಾರಣೆ ಕಾಮಗಾರಿ, 4 nos sluice gate ನಿರ್ಮಾಣ ಕಾಮಗಾರಿ, ಅವಶ್ಯವಿರುವ ಭಾಗಗಳಲ್ಲಿ Pitching, Fencing, Dhobi Ghat, Cattle ramp ಹಾಗೂ ಹೂಳು ಮತ್ತು ಗಿಡಗಂಟಿಗಳಿಂದ ತುಂಬಿದ್ದು, ನೀರಿನ ಹರಿಯುವ ಸಾಮರ್ಥ್ಯ ಕುಂಠಿತಗೊಂಡಿರುತ್ತದೆ. ತುಂಬಿರುವ ಹೂಳನ್ನು ತೆಗೆದು, ನೀರಿನ ಸಂಗ್ರಹಣೆಯನ್ನು ಹೆಚ್ಚಿಸುವುದು ಹಾಗೂ ಇತ್ಯಾದಿ ಕೆಲಸಗಳಿಗೆ ಸಂಬಂಧಿಸಿದ ಐಟಮ್‌ಗಳನ್ನು ಅಂದಾಜು ಪತ್ರಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.

ಕಾಮಗಾರಿಯ ಅಂದಾಜು ಮೊತ್ತದ ಪ್ರತಿಶತ 18 ರಂತೆ GST ಸೇರಿಸಿ ಒಟ್ಟು ಅಂದಾಜು ಮೊತ್ತ ರೂ.485.00 ಲಕ್ಷಗಳಾಗಿರುತ್ತದೆ. ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶ ನೀಡಲಾಗಿದೆ.

...provements to Bev...
...ebendigeri village Nadigatti Tan...
Shiggoa...

12) ಅಂದಾ...

**ಕಛೇರಿ ಆದೇಶ ಸಂ:ಮುಇಂ/ಸನೀ ಮತ್ತು ಅಂ.ಅ.ಇ/ಉವ/ವಿಜೆಪಿ/ಪಿಬಿ-3/ ಬೇವಿನಹಳ್ಳಿ ಗ್ರಾಮದ ಕೆರೆ, ಪಾಣಿಗಟ್ಟಿ ಗ್ರಾಮದ ಕೆರೆ /2025-26 / 1098 ದಿನಾಂಕ: 21 FEB 2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕಿನ ಬೆವಿನಹಳ್ಳಿ ಗ್ರಾಮದ ಊರ ಕೆರೆ, ಪಾಣಿಗಟ್ಟಿ ಗ್ರಾಮದ ಕೆರೆ, ಹಿರೇಬೆಂಡಿಗೇರಿ ಗ್ರಾಮದ ನಾದಿಗಟ್ಟ ಕೆರೆ, ತಿಮ್ಮಾಪುರ ಗ್ರಾಮದ ಊರ ಕೆರೆ ಮತ್ತು ಮಾದಾಪುರ ಕೆರೆ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ, 2023-24ನೇ ಸಾಲಿನ ಹಾಗೂ 2025-26 ನೇ ಸಾಲಿಗೆ ಮುಂದುವರೆದ ಏಕರೂಪ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಲಾದ ರೂ. 485.00 ಲಕ್ಷಗಳ (ನಾಲ್ಕೂ ನೂರು ಎಂಬತ್ತೈದು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಲೆಕ್ಕ ಶೀರ್ಷಿಕೆ 4702-00-101-1-07-139 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು ಅಡಿ ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

**ಷರತ್ತುಗಳು :-**

1) ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2) ವಲಯ ಮಟ್ಟದ ತಾಂತ್ರಿಕ ಸಮಿತಿಯ ಗಮನಿಸುವ ಅಂಶಗಳಿಗೆ ಅನುಸರಿಸಿ ಸಲ್ಲಿಸಿರುವ ಕುರಿತು ತಾಂತ್ರಿಕ ಮಂಜೂರಾತಿ ನೀಡುವ ಸಮಯದಲ್ಲಿ ಖಚಿತ ಪಡಿಸಿಕೊಳ್ಳುವದು.
3) ಅಂದಾಜು ಪಟ್ಟಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸಕ್ಷಮಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿಯನ್ನು ಪಡೆಯತಕ್ಕದ್ದು.
4) ದರಗಳ ವಿಶ್ಲೇಷಣೆಗಳಿಗೆ ಅಧೀಕ್ಷಕ ಅಭಿಯಂತರರು ಅನುಮೋದನೆ ನೀಡುವುದು.
5) ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ಕೂಡಲೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
6) ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ , ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
7) ಸದರಿ ಅಂದಾಜಿನಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳ ಅಂಶಗಳನ್ನು ಪ್ರಸಕ್ತ ಸಾಲಿನ ಯಾವುದೇ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕೈಗೊಂಡಿರುವದಿಲ್ಲವೆಂದು ಖಚಿತಪಡಿಸಿಕೊಳ್ಳುವದು.
8) ಕಾಮಗಾರಿಯನ್ನು ಸಣ್ಣ ನೀರಾವರಿ ಇಲಾಖೆಯ ನಿಯಮಾವಳಿಗಳ ಪ್ರಕಾರ, ಸ್ಪೇಸಿಫಿಕೇಶನ್ ಪ್ರಕಾರ ಮತ್ತು ಗುಣ ನಿಯಂತ್ರಣ ಪರೀಕ್ಷೆಗೊಳಪಡಿಸಿ ನಿರ್ವಹಿಸತಕ್ಕದ್ದು.
9) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಮತ್ತು ನಿಯಮಗಳು-2000 ರಂತೆ ಕಾಮಗಾರಿ ಟೆಂಡರ್ ಕರೆದು ಕೈಗೊಳ್ಳತಕ್ಕದ್ದು.
10) ಕಾಮಗಾರಿ ಪ್ರಾರಂಭಿಸುವ ಮುನ್ನ, ಪ್ರಗತಿಯಲ್ಲಿದ್ದಾಗ ಹಾಗೂ ಪೂರ್ಣಗೊಂಡ ನಂತರ ಛಾಯಾ ಚಿತ್ರಗಳನ್ನು ತೆಗೆದು ದಾಖಲೆಯಾಗಿ ಇಡತಕ್ಕದ್ದು.
11) ಕಾಮಗಾರಿಗೆ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ನಿಯಮಾನುಸಾರ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು.

12) ಅಂದಾಜಿನಲ್ಲಿ ಸಹಮತಿಸಿದ ಅನುದಾನದ ಮಿತಿಯಲ್ಲಿಯೇ Tender Premium Price Escalation, Land Acquisitions, Maintenance Expenses, GST ಇತ್ಯಾದಿಗಳ ಮೊತ್ತವು ಕೂಡಾ ಒಳಗೊಂಡಿರತಕ್ಕದ್ದು, ಯಾವುದೇ ಕಾರಣಕ್ಕೂ ಅಂದಾಜಿನಲ್ಲಿ ನಿರ್ಣಾಯಕ ಐಟಂಗಳು ಕೈಬಿಡದಂತೆ ನೋಡಿಕೊಳ್ಳತಕ್ಕದ್ದು, ಪ್ರಸ್ತಾಪಿಸಿದ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

13) ಸರಕಾರದ ಆದೇಶ ಸಂಖ್ಯೆ: MID/945/MISU/2025 ದಿನಾಂಕ:19-11-2025 ರಲ್ಲಿನ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಈ ಅನುಮೋದನೆಯನ್ನು ಸರ್ಕಾರದ ಆದೇಶ ಸಂ:ಪಿಡಬ್ಲ್ಯೂಡಿ 423 ಎಫ್‌ಸಿ-1 2018, ಬೆಂಗಳೂರು, ದಿನಾಂಕ:24/09/2018ರನ್ವಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಲ್ಲಿನ ಕ್ರಮಾಂಕ:1(a) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ನೀಡಲಾಗಿದೆ.

ಈ ಅನುಮೋದನೆಯನ್ನು ಈ ಕಛೇರಿಯ ದಾಖಲಾತಿಯಲ್ಲಿ ನೋಂದಣಿ **ಸಂಖ್ಯೆ: 321/2025-26 ರಲ್ಲಿ** ದಾಖಲಿಸಲಾಗಿದೆ.

**(ಹೆಚ್.ಎಲ್.ವೆಂಕಟೇಶ್)**
ಮುಖ್ಯ ಇಂಜಿನೀಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಉತ್ತರ ವಲಯ, ವಿಜಯಪುರ.

1. ಪ್ರತಿಯನ್ನು ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,ವಿಕಾಸ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಆದರಪೂರ್ವಕವಾಗಿ ಸಲ್ಲಿಸಲಾಗಿದೆ.
2. ಪ್ರತಿಯನ್ನು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಅಭಿನಂದನೆಗಳೊಂದಿಗೆ ಕಳುಹಿಸಿದೆ.
3. ಪ್ರತಿಯನ್ನು ಅಧೀಕ್ಷಕ ಇಂಜನೀಯರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಬೆಳಗಾವಿ ವೃತ್ತ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಪ್ರತಿಯನ್ನು ಆಡಳಿತಾತ್ಮಕ ಅನುಮೋದಿತ ಅಂದಾಜು ಪಟ್ಟಿಯೊಂದಿಗೆ ಕಾರ್ಯಪಾಲಕ ಇಂಜನೀಯರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಧಾರವಾಡ ವಿಭಾಗ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.
5. ಹೆಚ್ಚುವರಿ ಪ್ರತಿ.